## Government of Karnataka

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 14-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 8 ಪ್ರಾಸಾಃ 8

| | |
|---|---|
| ಹೆಸರು | ದೇವರಡ್ಡಿ |
| ತಂದೆಯ ಹೆಸರು | ಸಿದ್ರಾಮಪ್ಪ ಪಾಟೀಲ್ |
| ವಯಸ್ಸು | 55 ವರ್ಷ |
| ಉದ್ಯೋಗ | ಕಂದಾಯ ನಿರೀಕ್ಷಕರು ಜಾಲಹಳ್ಳಿ |
| ವಾಸಸ್ಥಳ | ಜಾಲಹಳ್ಳಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನಾನು 2001 ರಿಂದ 2017 ರವರೆಗೆ ದೇವದುರ್ಗ ತಾಲೂಕಿನಲ್ಲಿ ಗ್ರಾಮಲೆಕ್ಕಾಧಿಕಾರಿ ತಹಶೀಲ್ದಾರ ಕಾರ್ಯಾಲಯ ದೇವದುರ್ಗ ದಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ: 04-03-2017 ರಂದು ಸುಣ್ಣದಕಲ್ ಗ್ರಾಮದ ಹನುಮಂತಿ ಗಂಡ ಬಾಲಯ್ಯ ಇವರು ಮರಣ ಹೊಂದಿದ್ದು, ಚಾಸಾ-1 ರವರು ಕೊಟ್ಟ ಅರ್ಜಿಯ ಆಧಾರದ ಮೇರೆಗೆ ನಾನು ಶ್ರೀಮತಿ ಹನುಮಂತಿ ರವರ ಮರಣ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ದಿನಾಂಕ: 20-05-2017 ರಂದು ಸುಣ್ಣದಕಲ್ ಗ್ರಾಮದ ಹನುಮಂತ್ರಾಯ ತಂದೆ ಬಾಲಪ್ಪ ಇವರ ವಂಶಾವಳಿಯನ್ನು ನೀಡಲು ಚಾಸಾ-1 ರವರು ಕೊಟ್ಟ ಅರ್ಜಿಯ ಆಧಾರದ ಮೇರೆಗೆ ನಾನು ಹನುಮಂತ್ರಾಯ ತಂದೆ ಬಾಲಪ್ಪ ರವರಿಗೆ ಸೇರಿದ ವಂಶಾವಳಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿದಾರರು ಮರಣ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 22 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 22(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ವಂಶಾವಳಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿ ಪಿ

28 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 28(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟಿಸವಾಲು: ಆರೋಪಿತರ ಪರ ಶ್ರೀ ಎಮ್.ಎಮ್. ವಕೀಲರಿಂದ :-**

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ